**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1127/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 1**

**ದಿನಾಂಕಃ** 01.07.2026 **ಸಿಡಬ್ಲ್ಯೂ 1**

| | |
|---|---|
| ಹೆಸರು | ಶ್ರೀಮತಿ ಕವಿತಾ |
| ಗಂಡನ ಹೆಸರು | ರಾಘವೇಂದ್ರ |
| ವಯಸ್ಸು | 33 ವರ್ಷ |
| ಉದ್ಯೋಗ | ಟೈಲರಿಂಗ್ |
| ವಾಸ ಸ್ಥಳ | ಹರಗನಹಳ್ಳಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನನ್ನ ಮದುವೆಯು ಆರೋಪಿತನೊಂದಿಗೆ ಸುಮಾರು 17 ವರ್ಷಗಳ ಹಿಂದೆ ಆಗಿರುತ್ತದೆ. ನನಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಮದುವೆಯಾಗಿ 2 ವರ್ಷ ಅನ್ಯೂನ್ಯವಾಗಿದ್ದೆವು. ಆರೋಪಿತನು ಬೇರೊಬ್ಬ ಮಹಿಳೆಯೊಂದಿಗೆ ಅಕ್ರಮವಾಗಿ ಸಂಬಂಧ ಹೊಂದಿ ನನಗೆ ವಿನಾ ಕಾರಣ ಚಿತ್ರಹಿಂಸೆ ಮಾಡಿರುತ್ತಾನೆ. ಆರೋಪಿತನು ನನಗೆ ಕುಡಿದು ಬಂದು ಒದೆಯುವುದು ಮಾಡಿರುತ್ತಾನೆ. ದಿಃ01.08.2023 ರಂದು ಮಧ್ಯಾಹ್ನ 2 ಗಂಟೆ ಸಮಯದಲ್ಲಿ ನಾನು ಮಲಗಿಕೊಂಡಿದ್ದೆನು. ಆರೋಪಿತನು ಏಕಾಏಕಿ ನೀನು ಯಾರ ಜೊತೆ ಹೋಗಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ತರಕಾರಿ ಹೆಚ್ಚುವ ಕಟ್ಟಿಯಿಂದ ನನಗೆ ಎಡಭುಜಕ್ಕೆ ಮತ್ತು ಬಲಗಿವಿಗೆ ಮತ್ತು ತಲೆಗೆ ಹೊಡೆದಿರುತ್ತಾನೆ. ಗಲಾಟೆಯನ್ನು ಆರೋಪಿತನ ಅಣ್ಣ ಮಂಜುನಾಥ ಬಿಡಿಸಿರುತ್ತಾನೆ. ನಂತರ ನಾನು ಪೋಲೀಸರಿಗೆ ಕರೆ ಮಾಡಿದದ್ದು ಪೋಲೀಸರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ. ನಾನು ದೂರನ್ನು ನೀಡಿರುತ್ತೇನೆ. ನಂತರ ದಿಃ03.08.2023 ರಂದು ಪೋಲೀಸರು ಸ್ಥಳಕ್ಕೆ ಬಂದಿದ್ದು ನಾನು ಸ್ಥಳವನ್ನು ತೋರಿಸಿರುತ್ತೇನೆ ಪೋಲೀಸರು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಕಾಲಕ್ಕೆ ಪೋಲೀಸರು ಕಟ್ಟಿಗೆಯನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1, ಸಾಕ್ಷಿಯ ಸಹಿಯನ್ನು ನಿಪಿ.1 ಎ, ಪಂಚನಾಮೆಯನ್ನು ನಿಪಿ.2 ಸಾಕ್ಷಿಯ ಸಹಿಯನ್ನು ನಿಪಿ.2 ಎ, ಪಂಚನಾಮೆ ಕಾಲಕ್ಕೆ ತೆಗೆದ ಪೋಟೋವನ್ನು ನಿಪಿ.3 ಮತ್ತು 4 ಎಂದು, ಸಾಕ್ಷಿಯು ಒಂದು ಕಟ್ಟಿಗೆಯನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ.1 ಎಂದು ಗುರುತಿಲಾಯಿತು.

**ಪಾಟೀ ಸವಾಲುಃ** ಆರೋಪಿತರ ಶ್ರೀ ಆರ್ ಜಿ ಬಿ ವಕೀಲರಿಂದಃ

ನಾನು ಹಾಗೂ ಆರೋಪಿತರು ಪ್ರೀತಿಸಿ ಮದುವೆಯಾಗಿರುತ್ತೇನೆ. ಆರೋಪಿತರಿಗೆ ಕುಡಿಯುವ ಅಭ್ಯಾಸ ಇಲ್ಲ ಎಂದರೆ ಸರಿಯಲ್ಲ. ಗುನ್ಹಾ ಸ್ಥಳವು ರಾಷ್ಟ್ರೀಯ ಹೆದ್ದಾರಿಗೆ ಲಗತ್ತಾಗಿದೆ ಎಂದರೆ ಸರಿ. ನನ್ನ ಮನೆಯ ಪಕ್ಕ ಆರೋಪಿ ಹಾಗೂ ಅತ್ತೆ ವಾಸವಾಗಿದ್ದಾರೆ ಎಂದರೆ ಸರಿ. ನನ್ನ ಅತ್ತೆ ಮತ್ತು ನನ್ನ ಮಧ್ಯೆ

ಹೊಂದಾಣಿಕೆ ಇಲ್ಲದ್ದರಿಂದ ಆರೋಪಿ ನನ್ನನ್ನು ಬೇರೆ ಮನೆ ಮಾಡಿ ಇಟ್ಟಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿತನ ತಾಯಿಯನ್ನು ನೋಡಿಕೊಳ್ಳುವ ಪ್ರಮೇಯ ಬರುತ್ತದೆ ಎಂದು ನಾನು ಬೇರೆ ಮನೆಯಲ್ಲಿ ಇದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ತನ್ನ ತಾಯಿಯನ್ನು ನೋಡಿಕೊಳ್ಳುತ್ತಿರುವುದರಿಂದ ನಾನು ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ನನಗೆ ಹಲ್ಲೆ ಮಾಡಿರುವುದಿಲ್ಲ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅವರ ತಾಯಿಯನ್ನು ನೋಡಿಕೊಳ್ಳಬೇಕಾಗುತ್ತದೆ ಎಂದು ಆರೋಪಿತನನ್ನು ದೂರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ನನಗೆ ಕಿರಾಣಿ ಅಂಗಡಿ ಇಟ್ಟುಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಅದರಿಂದ ನನಗೆ ಆದಾಯ ಬಂದಿರುತ್ತದೆ ಎಂದರೆ ಸರಿ. ನಾನೂ ಆರೋಪಿತನನ್ನು ನಿರ್ಲಕ್ಷ್ಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ವಿವಾಹ ವಿಚ್ಛೇದನ ಪ್ರಕರಣದ ಬಗ್ಗೆ ನನಗೆ ನೆನಪಿರುವುದಿಲ್ಲ. ಅಂಗಡಿಯ ಅಭಿವೃದ್ಧಿಗಾಗಿ ಹಣವನ್ನು ಆರೋಪಿತನು ಹಾಕಿದ್ದು ನಾನು ಕೇಳಲು ಬಂದಾಗ ನಾನು ಈ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ನನ್ನ ಮೇಲೆ ಹಲ್ಲೆ ಮಾಡಿರುವುದಿಲ್ಲ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ನಾನು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪಂಚರ ಹೆಸರು ನನಗೆ ಗೊತ್ತಿರುವುದಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಪೋಲೀಸರು ಯಾವುದೇ ಮು.ಮಾ.ನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೋಲೀಸರು ಪಂಚನಾಮೆಯನ್ನು ಠಾಣೆಯಲ್ಲೇ ಬರೆದಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ ನಾನು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ